ಕಥೆ

# ಪಕ್ಷಾಂತರ

■ ಚೈತ್ರಿಕಾ ನಾಯ್ಕ ಹರ್ಗಿ

ಕಲೆ: ವಿಶ್ವನಾಥ ಎ.ಎಸ್‌.




ಸಚಿವ ರಂಗಾ ನಾಯಕ್ ದಿನಪತ್ರಿಕೆಯನ್ನು ಹಿಡಿದು ಬಾಲ್ಕನಿಯಲ್ಲಿ ಶತಪಥ ತಿರುಗುತ್ತಿದ್ದರು. ಗೇಟಿನ ಕಡೆಗೆ ಅರ್ಧ ಗಂಟೆಯಿಂದ ನೋಡಿದರೂ ಯಾರೂ ಒಳಬಂದಂತಹ ಸುಳಿವು ಕಾಣಲಿಲ್ಲ. ತಾನು ಬೇಕಂತಲೇ ಕಾರ್ಯಕ್ರಮಗಳಿಗೆ ತಡವಾಗಿ ಹೋಗುವಂತೆ, ಈ ಹುಡುಗರು ಇಂದು ತನ್ನನ್ನು ಕಾಯಿಸುತ್ತಿದ್ದಾರಾ? ಎಂದು ತನ್ನ ರಾಜಕೀಯ ಬುದ್ಧಿಯನ್ನು ಓಡಿಸಿದರು. 'ಛೇ ಛೇ, ಹಾಗಿರಲಿಕ್ಕಿಲ್ಲ, ನಾನೇ ಬರಲು ಹೇಳಿದ ಮೇಲೂ ಕಾಯಿಸುವಷ್ಟು ಹುಂಬ ಧೈರ್ಯ ಇರಲಾರದು' ಎಂದು ತನ್ನ ಅಸಹಾಯಕ ಸ್ಥಿತಿಗೆ ಪೇಪರನ್ನು ಟೀಪಾಯಿಯ ಮೇಲೆ ಎಸೆಯುತ್ತಾ ಅಸಮಾಧಾನದಿಂದ ಸೋಫಾ ಮೇಲೆ ಕುಸಿದರು.

'ವಿರೋಧ ಪಕ್ಷದವರ ಕೈಯ್ಯಲ್ಲಿ ಸಚಿವ ರಂಗಾ ನಾಯಕ್‌ರ ಖಾಸಗಿ ಡೈರಿ.'

'ನಾಳೆಯ ಲಂಚ್ ಬುಲೆಟಿನ್‌ನಲ್ಲಿ ಬಟಾಬಯಲಾಗಲಿವೆ ಸಚಿವರ ಡೈರಿಯಲ್ಲಿರುವ ಖಾಸಗಿ ವಿಚಾರಗಳು?'

'ರಂಗಾ ನಾಯಕ್ ಈವರೆಗೂ ನುಂಗಿದ ಹಣದ ಲೆಕ್ಕವೆಷ್ಟು?'

'ಕಾಲೇಜು ದಿನಗಳಲ್ಲಿ ಎಷ್ಟು ಹುಡುಗಿಯರ ಜೊತೆ ನಡೆಯುತ್ತಿತ್ತು ರಂಗಾ ನಾಯಕ್ ಲವ್ವಿ ಡವ್ವಿ?'

ಎಂದು 24/7 ನ್ಯೂಸ್ ಚಾನೆಲ್‌ನ ನಿರೂಪಕಿಯೊಬ್ಬಳು ರಾತ್ರಿ 8 ಗಂಟೆ ನ್ಯೂಸ್‌ನಲ್ಲಿ ಗಂಟಲು ಹರಿಯುವಂತೆ ಕಿರುಚುತ್ತಿದ್ದಳು. ಗಾಜು ಫಳ್ ಎಂಬ ಸದ್ದಿನ ಜೊತೆಗೆ ಬ್ರೇಕಿಂಗ್ ನ್ಯೂಸ್ ಹೆಡ್‌ಲೈನ್‌ಗಳು ಎಲ್.ಇ.ಡಿ. ಟಿವಿಯ ಮೇಲೆ ಕುಣಿಯುತ್ತಿದ್ದದನ್ನು ನೋಡಿ ರಂಗಾ ನಾಯಕ್‌ರ ಎದೆ ಧಸಕ್ ಎಂದಿತ್ತು. ಅವರು ಗಲಿಬಿಲಿಯಾಗಿದ್ದನ್ನು ಕಂಡ ಪಿ.ಎ., 'ಈ ಚಾನಲ್ ಅವ್ರದ್ದು ಹಣ ಪೀಕೊ ಬ್ಯುಸಿನೆಸ್ ಸರ್, ಸಮಾಜ ಉದ್ಧಾರ ಮಾಡೋರಾದ್ರೆ ಡಿಟೇಲ್ಸ್ ಪೂರಾ ಬಿಚ್ಚಿಡ್ತಿರ್ಲಿಲ್ವೆ? ಸೆಟಲ್ಮೆಂಟ್ ಮಾಡಣಾ ಬಿಡಿ' ಎಂದು ನಾಯಕ್ ಅವರನ್ನು ಸಮಾಧಾನ ಮಾಡಲೆತ್ನಿಸಿದ.

ಸುದ್ದಿ ಪ್ರಸಾರವಾಗಿ ತಾಸಾದರೂ ಚಾನೆಲ್‌ನವರು, ಯಾವ ಪತ್ರಕರ್ತರೂ ಫೋನ್ ಮಾಡಿ ಹಣಕ್ಕೆ ಪೂರ್ವ ಪೀಠಿಕೆ ಹಾಕದೆ ಇದ್ದಾಗ, ಯಾವುದಕ್ಕೂ ಇರಲಿ ಚಾನೆಲ್‌ನವರನ್ನು ನಂಬುವಂತಿಲ್ಲ ಎಂದು ನಾಯಕ್ ತಮ್ಮ ಪಿ.ಎ. ಕೈಯಲ್ಲಿ ಚಾನೆಲ್ ಹೆಡ್‌ಗಳಿಗೆ ಫೋನ್ ಮಾಡಿಸಿ ನಾಳೆ ಸುದ್ದಿ ಬರದಂತೆ ಪೇಮೆಂಟ್ ಬಗ್ಗೆ ಮಾತಾಡಿಸಿದರು. ಸಾಮಾಜಿಕ ಜಾಲತಾಣದಲ್ಲಿ ಈ ಬಗ್ಗೆ ಚರ್ಚೆಯಾಗಲು ಶುರುವಾದರೆ, ವಿಷಯಾಂತರ ಮಾಡಲು ಬೇರೆ ವಿಷಯವನ್ನು ತಯಾರು ಮಾಡಿಟ್ಟುಕೊಳ್ಳಬೇಕು ಎಂದು ಪಕ್ಷದ ಐಟಿ ಸೆಲ್ ಮುಖ್ಯಸ್ಥನಿಗೆ ಖುದ್ದಾಗಿ ಫೋನ್ ಮಾಡಿ ಹೇಳಿದರು.

'ಚಾನೆಲ್ ವರದಿಗಾರನನ್ನು ನಾಳೆ ಮನೆಗೆ ಕರೆಸಕಾಗತ್ತಾ ವಿಚಾರಿಸಿ ಒಮ್ಮೆ. ಅದಕ್ಕೆ ಬೇಕಾದ್ರೆ ಎಕ್ಸ್ಟ್ರಾ ಪೇಮೆಂಟ್ ಮಾಡೋಣ' ಎನ್ನುತ್ತಾ ಪಿ.ಎ. ಪರಮೇಶಿಯ ಉತ್ತರಕ್ಕೂ ಕಾಯದೆ ಒಳನಡೆದರು.

'ಸಮ್ಮಿಶ್ರ ಸರ್ಕಾರದಲ್ಲಿ ಖಾಲಿ ಶಾಸಕನಾಗಿರುವುದರಲ್ಲಿ ಏನು ಸುಖವಿದೆ' ಎಂದು ಸರ್ಕಾರ ಕೆಡವಲು ಸಂಚು ರೂಪಿಸಿದಾಗಲೂ ಹಾಲಿ ಸಚಿವ ನಾಯಕ್ ಅವರಿಗೆ ಇಷ್ಟು ಭಯವಾರಲಿಲ್ಲ. 'ಐಪಿಎಸ್ ಅಧಿಕಾರಿಯ ಸಾವಿನ ಹಿಂದೆ ಸಚಿವರ ಕೈವಾಡವಿದೆ' ಎಂದು ಚಾನೆಲ್‌ಗಳು ಇಡೀದಿನ ಕಿರುಚಿದರೂ ತಲೆಕೆಡೆಸಿಕೊಂಡಿರಲಿಲ್ಲ. 'ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ರಾಮಾರೆಡ್ಡಿ ಜೊತೆ ಸೇರಿ ನೂರಾರು ಕೋಟಿ ಲಂಚ ಪಡೆದಿದ್ದಾರೆ' ಎಂದು ವಿರೋಧ ಪಕ್ಷದವರು ಮಾಧ್ಯಮಗೋಷ್ಠಿಯಲ್ಲಿ ಹೇಳಿದಾಗಲೂ ಸಚಿವರ ಕೂದಲು ಕೊಂಕಿರಲಿಲ್ಲ. ಇದೆಲ್ಲಾ ರಾಜಕೀಯದಲ್ಲಿ ಮಾಮೂಲು. ಇದರಿಂದ ತನ್ನ ಮಾನ ಮರ್ಯಾದೆ ನೈತಿಕತೆಗೆ ಧಕ್ಕೆಯಾಗಿಲ್ಲ ಎಂಬಂತೆಯೇ ನಾಯಕ್ ರಾಜಾರೋಷವಾಗಿ ಹಿಂದಿನ ಗತ್ತಿನಲ್ಲಿದ್ದರು.

'ತಾನು ಸಚಿವನಾಗಿರುವ ಪಕ್ಷದವರೆ? ಶಾಸಕನಾಗಿದ್ದ ಪಕ್ಷದವರೆ?' ಯಾರು ಹೀಗೆ ತನ್ನ ಬೆನ್ನ ಹಿಂದೆ ಸಂಚು ಮಾಡಿದ್ದಾರೆ ಎಂಬುದು ರಂಗಾ ನಾಯಕ್ ಅವರಿಗೆ ಹೊಳೆಯದಾಯಿತು. ಸಮ್ಮಿಶ್ರ ಸರ್ಕಾರ ಕೆಡವಿದ್ದಕ್ಕೆ, ಪಕ್ಷ ಬಿಟ್ಟಿದ್ದಕ್ಕೆ ಆ ಪಕ್ಷದವರು; ಈ ಪಕ್ಷ ಸೇರಿ ಸಚಿವ ಸ್ಥಾನ ಪಡೆದಿದ್ದಕ್ಕೆ ಈ ಪಕ್ಷದಲ್ಲಿ ಕೆಲವರಿಗೆ ಅಸಮಾಧಾನವಂತೂ ಇತ್ತು. ಒಟ್ಟಿನಲ್ಲಿ ಅಸಮಾಧಾನ ಎರಡೂ ಕಡೆಯವರಿಗೂ ಇದ್ದಿದ್ದರಿಂದ ಇದನ್ನು ಮಾಡಿಸಿದವರು ಯಾರು ಎಂಬ ಪ್ರಶ್ನೆ ಹಾಗೆ ಉಳಿಯಿತು.

ಪಕ್ಷದಿಂದ ನಾಲ್ಕು ಬಾರಿ ಆಯ್ಕೆಯಾದರೂ ಇತ್ತೀಚಿನ ವಿದ್ಯಮಾನಗಳನ್ನು ನೋಡಿದಾಗ ಮುಂದಿನ ಬಾರಿ ಗೆಲ್ಲುವುದರ ಬಗ್ಗೆ ನಾಯಕ್ ಅವರಿಗೆ ಅನುಮಾನವಿತ್ತು. ಹಿಂದೆ ಮೂರು ಬಾರಿ ಶಾಸಕರಾದರೂ ಸಚಿವ ಪಟ್ಟ ಸಿಗದ ಅಸಮಾಧಾನ ಒಳಗೊಳಗೆ. ಪಕ್ಷಕ್ಕೆ ಬಹುಮತ ಬರದೆ ಸಮ್ಮಿಶ್ರ ಸರ್ಕಾರ ರಚನೆ ಮಾಡಲು ಮಾಜಿ ಮುಖ್ಯಮಂತ್ರಿಗಳು ಮುಂದಾದಾಗ ಇನ್ನು ಈ ಪಕ್ಷದಲ್ಲಿ ತಮಗೆ ಭವಿಷ್ಯವೇ ಇಲ್ಲ ಎಂದು ಅವರಿಗೆ ಖಚಿತವಾಗಿಹೋಗಿತ್ತು. ಹೊಸ ರೀತಿಯ ರಾಜಕೀಯ ಪ್ರಚಾರಕ್ಕೆ ಒಗ್ಗಿಕೊಳ್ಳದ, ಹೊಸ ಅಲೆಯಲ್ಲಿ ಕೊಚ್ಚಿಹೋಗುತ್ತಿರುವ ಪಕ್ಷದಲ್ಲಿ ಇದ್ದೇನು ಉಪಯೋಗವಿಲ್ಲ ಎಂದು ಮೇಲಿಂದ ಮೇಲೆ ಯೋಚನೆ ಬರುತ್ತಿತ್ತು.

ಅವರ ಯೋಚನೆಗೆ ಇಂಬು ನೀಡುವಂತೆ ಅದೊಂದು ದಿನ ಮುಖ್ಯಮಂತ್ರಿಗಳ ಸಭೆಯಲ್ಲಿ, ಸಮಾಜವಾದಿ ಸಚಿವರೊಬ್ಬರು, 'ಯಾಕ್ರಿ ನಾಯಕ್? ಕ್ಷೇತ್ರದಲ್ಲಿ ಹಿಂದೂಗಳು ಒಟ್ಟಾಗಬೇಕು